ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು
ಕೃಷಿ ಹವಾಮಾನ ವಿಭಾಗ
ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು-65
ಪಟ್ರೇನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 30.08.2013

ಈ ವಾರದ ಮುನ್ಸೂಚನೆ (ದಿನಾಂಕ 31.08.13– 04.09.13 ವರೆಗೆ)

ನಿಯತಾಂಕಗಳು	31.08.13	01.09.13	02.09.13	03.09.13	04.09.13
ಮಳೆ (ಮಿ.ಮೀ)	2	3	2	3	3
ಗರಿಷ್ಠ ಉಷ್ಣಾಂಶ(ಡಿ.ಸೆ.)	31	32	32	32	31
ಕನಿಷ್ಠ ಉಷ್ಣಾಂಶ (ಡಿ.ಸೆ.)	21	22	22	22	21
ಮೋಡ (ಪ್ರಮಾಣ)	6	6	6	6	8
ಅರ್ದ್ರತೆ ೭.೨೦ ಬೆ (ಶೇ)	85	88	75	77	78
ಅರ್ದ್ರತೆ ೨.೨೦ ಮ (ಶೇ)	52	54	53	53	50
ಗಾಳಿಯ ವೇಗ (ಕಿ.ಮೀ/ಗಂಟೆಗೆ)	6	5	4	5	4
ಗಾಳಿಯ ದಿಕ್ಕು (ಡಿಗ್ರಿ)	310	290	270	260	260

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ಎಲ್ಲಾ ಐದು ದಿನಗಳಲ್ಲೂ ಸಂಜೆ ಅಥವಾ ರಾತ್ರಿಯ ವೇಳೆಯಲ್ಲಿ ಅಲ್ಲಲ್ಲಿ ಚದುರಿದಂತೆ ಹಗುರದಿಂದ ಸಾಧಾರಣವಾಗಿ ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶ 31.0-32.0^{o}C ಮತ್ತು ಕನಿಷ್ಠ 21-22°C ಇರಲಿದೆ. ಬೆಳಿಗಿನ ಅರ್ದ್ರತೆ ಪ್ರಮಾಣ ಶೇ 75-88 % ಇದ್ದು ಮಧ್ಯಾಹ್ನ 50-54% ಇರುವುದು ಮತ್ತು ಗಾಳಿಯು ನೈರುತ್ಯ ದಿಕ್ಕಿನಿಂದ ಗಂಟೆಗೆ ಸರಾಸರಿ 4-6 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಮಳೆ ಬಿದ್ದು ತೇವಾಂಶ ಇದ್ದರೆ ಅಲ್ಪಾವಧಿ ರಾಗಿ ತಳಿಗಳಾದ ಇಂಡಾಫ್-೫, ಜಿ.ಪಿ.ಯು-೨೮, ಜಿ.ಪಿ.ಯು-೪೫, ಜಿ.ಪಿ.ಯು-೪೮ ತಳಿಗಳ ಬೀಜಗಳನ್ನು ಬಿತ್ತಬಹುದು
- ಅಲಸಂದೆ ತಳಿಯಾದ ಸಿ-೧೫೨ ಕೂಡ ಅಲ್ಪಾವಧಿ ತಳಿಯಾಗಿದ್ದು, ಬಿತ್ತನೆ ಮಾಡಲು ಸೂಚಿಸಲಾಗಿದೆ.
- ಮೇವಿನ ಜೋಳದ ತಳಿಯಾದ ಅಫ್ರಿಕನ್ ಟಾಲ್, ಬಿಳಿ ಮತ್ತು ಹಳದಿ ತಳಿಗಳ ಬೀಜಗಳನ್ನು ಬಿತ್ತನೆ ಮಾಡುವುದು.
- ಎರೆ ಹುಳು ಗೊಬ್ಬರ, ಅಗ್ರಿ ಗೋಲ್ಡ್ ಮತ್ತು ಲಘು ಪೋಷಕಾಂಶಗಳನ್ನು ಹತ್ತಿರದ ರೈತ ಸಂಪರ್ಕ ಕೇಂದ್ರಗಳಲ್ಲಿ ಖರೀದಿಸಿ ಮಣ್ಣಿಗೆ ಸೇರಿಸುವುದರಿಂದ ಪೋಷಕಾಂಶಗಳ ಕೊರತೆಯನ್ನು ಹತೋಟಿಗೆ ತರಬಹುದು.
- ಕೆಲವು ಕಡೆಗಳಲ್ಲಿ ಲಘು ಪೋಷಕಾಂಶಗಳ ಕೊರತೆಯಿಂದ ಟೊಮ್ಯಾಟೊ ಬೆಳೆಯು ಹಳದಿ ಬಣ್ಣಕ್ಕೆ ತಿರುಗುತ್ತಿದ್ದು ಮಾರುಕಟ್ಟೆಯಲ್ಲಿ ದೊರೆಯುವ ಅಗ್ರೋಮಿನ್ ಅಥವಾ ಇನ್ನಾವುದಾದರೂ ದ್ರವ ರೂಪದ ಗೊಬ್ಬರವನ್ನು ಸಿಂಪಡಿಸಲು ಸ್ರಚಿಸಲಾಗಿದೆ.
- ರಾಗಿ, ತೊಗರಿ, ಪಾಪ್ ಕಾರ್ನ್ ಮುಂತಾದ ಬೆಳೆಗಳಲ್ಲಿ ಅಂತರ ಬೇಸಾಯ ಮಾಡಿ ಕಳೆಯನ್ನು ತೆಗೆಯಲು ಸೂಚಿಸಲಾಗಿದೆ

ಪಾಪ್ ಕಾರ್ನ್: ಕಾಂಡ ಕೊರೆಯುವ ಹುಳು ಕಂಡುಬಂದರೆ:

ಕ್ಲೋರೊಪೈರಿಫ಼ಾಸ್ ಅನ್ನು ೧.೫ ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು ಸೂಕ್ತ.

ಗುಲಾಬಿ: ಥ್ರಿಪ್ಸ್:

- ಥ್ರಿಪ್ಸ್ ನುಸಿಯ ಬಾಧೆಯನ್ನು ತಡೆಯಲು ಬೆಳೆಯ ಸುತ್ತ ಇರುವ ಕಳೆಗಳನ್ನು ನಾಶ ಪಡಿಸಬೇಕು ಹಾಗೂ ಹೊಲವನ್ನು ಶುಚಿಯಾಗಿಡಬೇಕು
- ಹೊಲದ ಸುತ್ತಲೂ ಬಲೆ/ನೆಟ್ ಹಾಕಬೇಕು ಅಥವಾ ಎತ್ತರ ಬೆಳೆಯುವ ಬೆಳೆಗಳಾದ ಮೆಕ್ಕೆ ಜೋಳ/ ಜೋಳ ಇತ್ಯಾದಿ ಬೆಳೆಗಳನ್ನು ಬೆಳೆಸಿ ಮುಖ್ಯ ಬೆಳೆಗಳನ್ನು ರಸ ಹೀರುವ ಕೀಟಗಳಿಂದ ರಕ್ಷಿಸಬಹುದು.
- ಅಜಾಡಿರಕ್ಟಿನ್/ಬೇವಿನ ಎಣ್ಣೆ/ಇವುಗಳಲ್ಲಿ ಯಾವುದಾದರು ಒಂದನ್ನು ಸಿಂಪಡಿಸಿ.

ಕಪ್ಪು ಚುಕ್ಕೆ ರೋಗ:

- ✓ ಮ್ಯಾಂಕೊಜೆಬ್ (೨ ಮಿ.ಲೀ/ಪ್ರತಿ ಲೀಟರ್ ನೀರಿಗೆ) ಅಥವಾ ಕವಚ್ (೨ ಮಿ.ಲೀ/ಪ್ರತಿ ಲೀಟರ್ ನೀರಿಗೆ) ಅಥವಾ ಮಾಸ್ಟರ್ ಅನ್ನು ಸಿಂಪಡಿಸಿ.

ದ್ರಾಕ್ಷಿ:

ಕೆಲವು ಕಡೆಗಳಲ್ಲಿ ಪರಾಗಸ್ಪರ್ಶ ಅಂತ್ಯಗೊಂಡು ಕಾಯಿ ಕಟ್ಟುವ ಹಚಿತದಲ್ಲಿರುವುದರಿಂದ ಥ್ರಿಪ್ಸ್ ನುಸಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಸೂಚಿಸಿದೆ.

ಹೂ ಕೋಸು ಹಾಗೂ ಎಲೆ ಕೋಸುವಿನಲ್ಲಿ ಎಲೆ ತಿನ್ನುವ ಹುಳು (ಡೈಮಂಡ್ ಬ್ಯಾಕ್ ಮಾತ್):

ಇವುಗಳನ್ನು ಹತೋಟಿ ಮಾಡಲು ಕ್ವಿನಾಲ್ಫಾಸ್ ಅಥವಾ ಕ್ಲೋರೊಪೈರಿಫ಼ಾಸ್ ಅನ್ನು ೨.೫ ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು ಸೂಕ್ತ.

ನೋಡಲ್ ಅಧಿಕಾರಿ
ಡಾ||ಎಮ್.ಬಿ. ರಾಜೇಗೌಡ
ಬೆಂಗಳೂರು

This document was created using Smart PDF Creator
Torrent Version this message purchase the product at www.SmartPDFCreator.com